## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 740/2024

**ಸಾಕ್ಷಿಯನ್ನು ದಿಃ 07.07.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಸೌಮ್ಯ | ಸಿಡಬ್ಲ್ಯೂಃ 1 | ಪಿಡಬ್ಲ್ಯೂಃ 1 |
| ಗಂಡನ ಹೆಸರು | ಪ್ರತಾಪ್ ಬಿ.ವಿ | | |
| ವಯಸ್ಸು | 31 ವರ್ಷ | | |
| ಕೆಲಸ | ಪ್ರಾಥಮಿಕ ಶಾಲೆಯ ಶಿಕ್ಷಕಿ | | |
| ವಾಸಸ್ಥಳ | ಬೀಜಗನಹಳ್ಳಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ-2 ನನ್ನ ತಂದೆ. ಚಾಸಾ- 3 ನನ್ನ ತಾಯಿ. ಚಾಸಾ-4 ರಿಂದ 8 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. 1ನೇ ಆರೋಪಿ ನನ್ನ ಗಂಡ. 2ನೇ ಆರೋಪಿ ನನ್ನ ಅತ್ತೆ. 3ನೇ ಆರೋಪಿ ನನ್ನ ಮೈದುನ. 4ನೇ ಆರೋಪಿ 1ನೇ ಆರೋಪಿಯ ಸೋದರ ಮಾವನ ಮಗ. 5ನೇ ಆರೋಪಿ 1ನೇ ಆರೋಪಿ ಸೋದರ ಮಾವ. ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸ್ಥಳ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಮಹಜರನ್ನು ನಿಪಿ-2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಇನ್ನೊಂದು ಸ್ಥಳ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಮಹಜರನ್ನು ನಿಪಿ-3 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವ ಚಿತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು. ದಿಃ 02.03.2024 ರಂದು ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ್ದೇನೆ.

ನಾನು ಬೀಜಗನಹಳ್ಳಿ ಗ್ರಾಮದ ಚಾಸಾ-2 ರವರ ಮಗಳಾಗಿದ್ದೇನೆ. ಚಾಸಾ-4 ನನ್ನ ತಮ್ಮ. 2012ರಲ್ಲಿ ನಾನು ಇಷ್ಟಪಟ್ಟು 1ನೇ ಆರೋಪಿಯನ್ನು ಮದುವೆಯಾದೆ. ನನ್ನ ಮತ್ತು

1ನೇ ಆರೋಪಿ ಯ ಮದುವೆ ದಿಃ 21.11.2012ರಂದು ಹುಣಸೂರಿನ ಮಂಜುನಾಥ ದೇವಸ್ಥಾನದಲ್ಲಿ ನಡೆಯಿತು. ಮದುವೆಗೆ ನನ್ನ ಸಂಬಂಧಿಕರು ಬಂದಿರಲಿಲ್ಲ. ದಿಃ 29.10.2014 ರಂದು ನನ್ನ ಮತ್ತು 1ನೇ ಆರೋಪಿಯ ಮದುವೆಯನ್ನು ಹುಣಸೂರು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಿಕೊಂಡಿದ್ದೇವೆ. ಮದುವೆಯಾದ ನಂತರ 6 ವರ್ಷಗಳ ಕಾಲ ನಾನು ಮತ್ತು 1ನೇ ಆರೋಪಿ ಚೆನ್ನಾಗಿದ್ದೆವು. 6 ವರ್ಷಗಳ ನಂತರ 1ನೇ ಆರೋಪಿ ನನ್ನ ಜೊತೆ ಸುಮ್ಮನೆ ಜಗಳ ತೆಗೆಯಲು ಪ್ರಾರಂಭಿಸಿರದು. ಯಾಕೆ ಎಂದು ನಾನು ವಿಚಾರಿಸಿದಾಗ 1ನೇ ಆರೋಪಿಗೆ ಬೇರೆಯವರೆ ಜೊತೆ ಅನೈತಿಕ ಸಂಬಂಧ ಇರುವುದು ನನಗೆ ಗೊತ್ತಾಯಿತು. ಅದನ್ನು ನಾನು ಪ್ರಶ್ನಿಸಿದಾಗ ನನಗೆ ಹೊಡೆ-ಬಡಿ ಮಾಡಿ, ಬೈದು, ಮಾನಸಿಕ ಹಿಂಸೆ ಕೊಟ್ಟರು. ನಿನ್ನ ಅಪ್ಪನ ಮನೆಯಲ್ಲಿ ವರದಕ್ಷಿಣೆ ಕೊಟ್ಟು ಮದುವೆ ಮಾಡಿದ್ದಾರ ಎಂದು ಹೇಳಿ ಯಾವಾಗಲೂ ಬೈದು ಜಗಳ ಮಾಡುತ್ತಿದ್ದರು. ನನಗೆ ಇಬ್ಬರು ಮಕ್ಕಳಿದ್ದಾರೆ. ಅವರ ಹೆಸರು ಬಬಿತಾ ಮತ್ತು ದುವಿತ್ ಪ್ರತಾಪ್. ನನ್ನಗಂಡ ಯಾವಾಗಲೂ ಕುಡಿದು ಬಂದು ಅಪ್ಪನ ಮನೆಯಿಂದ ಹಣ ತಂದಿದ್ದಿಯಾ ಎಂದು ಹಿಂಸೆ ಕೊಡುತ್ತಿದ್ದರು. 2ನೇ ಆರೋಪಿ ನನ್ನನ್ನು ಉದ್ದೇಶಿಸಿ ಇನ್ನೂ ಒಳ್ಳೆಯ ಕಡೆ ನೋಡಿ ಮದುವೆ ಮಾಡಬಹುದಾಗಿತ್ತು. ನನ್ನ ಗಂಡ ಮತ್ತು ಅತ್ತೆಗೆ 3 ರಿಂದ 5ನೇ ಆರೋಪಿತರು ಪ್ರೇರಿಪಿಸುತ್ತಿದ್ದರು. ಈ ತರ ಮಾಡುತ್ತಿರುವುದು ತಪ್ಪು ನೀವು ಅವರಿಗೆ ಬುದ್ದಿ ಹೇಳಬೇಕಲ್ಲವೇ ಎಂದು ಕೇಳಿದಾಗ, ಅವನು ಹೇಳಿದ್ದೆ ಸರಿ. ನಿನ್ನ ಅಪ್ಪನ ಮನೆಯಲ್ಲಿ ವರದಕ್ಷಿಣೆ ಕೊಟ್ಟು ಮದುವೆ ಮಾಡಿದ್ದಾರ ಎಂದು ನನಗೆ ಬೈಯ್ಯುಲು ಪ್ರಾರಂಭಿಸಿದರು.

ದಿಃ 30.08.2022 ರಂದು ಬೆಳಿಗ್ಗೆ 11.45 ರಿಂದ 12.30 ರ ಸಮಯದಲ್ಲಿ ಆರೋಪಿತರೆಲ್ಲರೂ ಸೇರಿ ನನಗೆ ಹೊಡೆದರು. ಅದಕ್ಕೆ ನಾನು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದೆ. ಆಗ 1ನೇ ಆರೋಪಿ ಯಾವಾಗಲೂ ಹೀಗೆ ಹೆದರಿಸಲು ಬರುತ್ತೀಯಾ ಹೋಗಿ ಸಾಯಿ ಎಂದು ಹೇಳಿದರು. ನಾನು ಆತ್ಮಹತ್ಯೆ ಮಾಡಲು ಪ್ರಯತ್ನಿಸಿದಾಗ ಚಾಸಾ-2 ರಿಂದ 4 ರವರು ಬಿಡಿಸಿದರು. ಅವರು ಬಿಡಿಸಲು ಪ್ರಯತ್ನಿಸಿದಾಗ 1ನೇ ಆರೋಪಿ ಚಾಸಾ-3 ರವರಿಗೆ ಕೈ ಯಿಂದ ಹೊಡೆದರು. 1, 3 ಮತ್ತು 4ನೇ ಆರೋಪಿತರು ಚಾಸಾ-4 ರವರಿಗೆ ಎದೆಯ ಮೇಲೆ ಕಾಲಿಟ್ಟು ಹೊಡೆದರು. ಈ ಬಗ್ಗೆ ಹುಣಸೂರು ಪಟ್ಟಣ ಠಾಣೆಯಲ್ಲಿ ಸಿಸಿ ನಂಃ 994/2022 ರಂತೆ ಪ್ರಕರಣ ದಾಖಲಾಯಿತು. ಪೋಲಿಸರು ಠಾಣೆಗೆ ಕರೆದರು ಆಗ

ಆರೋಪಿತರು ಇನ್ನು ಈ ತರ ಮಾಡುವುದಿಲ್ಲ ಎಂದು ಹೇಳಿದರು. ತಂದೆಯ ಮನೆಯಲ್ಲಿಯೇ ಚಿಕಿತ್ಸೆ ಕೊಡಿಸಲಿ ನಾನು ನಂತರ ಬಂದು ಕರೆದುಕೊಂಡು ಹೋಗುವುದಾಗಿ 1ನೇ ಆರೋಪಿ ಹೇಳಿದರು. ಆದರೆ ಇಲ್ಲಿಯವರೆಗೂ ಕರೆದುಕೊಂಡು ಹೋಗಿಲ್ಲ. ಅಂದಿನಿಂದ ಇಲ್ಲಿಯವರೆಗೆ ನಾನು ತಂದೆಯ ಮನೆಯಲ್ಲಿ ಇದ್ದೇನೆ.

ದಿಃ 26.01.2023 ರಂದು ಸಂಜೆ 7-30 ಗಂಟೆಯಲ್ಲಿ ನಾನು ತಂದೆಯ ಮನೆಯಲ್ಲಿದ್ದಾಗ 1ನೇ ಆರೋಪಿ ಕುಡಿದುಕೊಂಡು ಚಪ್ಪಲಿ ಕಾಲಿನಲ್ಲಿ ಮನೆಯ ಒಳಗೆ ಬಂದು ನನಗೆ ಬೇವರ್ಸಿ, ಲೋಫರ್ ಎಂದು ಕೆಟ್ಟದಾಗಿ ಬೈದು, ನನಗೆ ಕೈಗಳಿಂದ ಮುಖಕ್ಕೆ ಹೊಡೆದರು. ನನಗೆ ಮೂಗಿನಿಂದ ರಕ್ತ ಬಂತು. ಆ ಜಗಳವನ್ನು ಚಾಸಾ-5 ಮತ್ತು 6 ರವರು ಬಿಡಿಸಿದರು. ನನ್ನನ್ನು ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದರು. 29ನೇ ದಿನಾಂಕದಂದು ನಾನು ಹುಣಸೂರು ಪಟ್ಟಣ ಠಾಣೆಯಲ್ಲಿ ದೂರನ್ನು ಕೊಟ್ಟೆ, ಅಲ್ಲಿ ಪುನಃ ಕರೆಸಿ ಮಾತನಾಡಿದಾಗ ಕರೆದುಕೊಂಡು ಹೋಗುವುದಾಗಿ ಹೇಳಿದರು. ಅವರ ಮನೆಯಲ್ಲಿ ವರದಕ್ಷಿಣೆ ಕೊಟ್ಟಿದ್ದಾರಾ ಬೇರೆ ಮನೆ ಮಾಡಲು ದುಡ್ಡು ಇಲ್ಲ, ಇರುವ ಮನೆಗೆ ಕರೆದುಕೊಂಡು ಹೋಗಿ ಎಂದು ಹೇಳಿದಾಗ ಸಮಯ ಕೇಳಿದರು. ಆದರೂ ಕೂಡ ನನ್ನನ್ನು ಕರೆದುಕೊಂಡು ಹೋಗಲಿಲ್ಲ. ಎಷ್ಟು ದಿನ ತಂದೆಯ ಮನೆಯಲ್ಲಿ ಇರುವುದು ಎಂದು ಹೇಳಿ 2023 ನವೆಂಬರ್ ತಿಂಗಳಲ್ಲಿ ನಾನು ಮಕ್ಕಳನ್ನು ಕರೆದುಕೊಂಡು ಆರೋಪಿತರ ಮನೆಗೆ ಹೋದೆ. ನಾನು ಹೋದಾಗ ಆರೋಪಿತರೆಲ್ಲರೂ ಮನೆಯಲ್ಲಿಯೇ ಇದ್ದರು. ನಾನು ಗೇಟಿನ ಹತ್ತಿರ ಹೋದಾಗ ಹಿಂದಿನಿಂದ ಬಂದು ನನ್ನನ್ನು ತಳ್ಳಿದರು. ಇದೇನು ಸೂಳೆ ಮನೆನಾ ಬೇಕಾದಾಗ ಬಂದು ಹೋಗಲು ನಿನ್ನ ಅಪ್ಪ ವರದಕ್ಷಿಣೆ ಕೊಟ್ಟಿದ್ದಾರಾ ಇನ್ನೇನಾದರೂ ಬಂದರೆ ನಾನು ಏನು ಮಾಡುತ್ತೇನೆ ಗೊತ್ತಿಲ್ಲ, ನೀನೇ ಜವಾಬ್ದಾರಿ ಎಂದು ಆರೋಪಿತರು ಹೇಳಿದರು. ಕೊಲೆ ಮಾಡಿ ಜೈಲಿಗೆ ಹೋಗುತ್ತೇನೆ, ಹೇಗಿದ್ದರೂ ಠಾಣೆಗೆ ಅಲೆದಾಡಿಸುತ್ತಿದ್ದಿಯಾ ಎಂದು ಹೇಳಿದರು. ಆಗ ನಾನು ಇಲ್ಲಿದ್ದರೆ ಜಗಳ ಹೆಚ್ಚಾಗುತ್ತದೆ ಮತ್ತು ನನಗೆ ಏನಾದರೂ ಮಾಡುತ್ತಾರೆ ಎಂದು ಭಯಗೊಂಡು ವಾಪಸ್ಸು ತವರು ಮನೆಗೆ ಬಂದೆ. ದಿಃ 12.02.2024 ರಂದು ಮಹಿಳಾ ಪೋಲಿಸ್ ಠಾಣೆಗೆ ದೂರು ಕೊಟ್ಟೆ, ಅಲ್ಲಿ ಕರೆಸಿ ಮಾತನಾಡಿದಾಗ ನಾನು ಯಾವುದೇ ಕಾರಣಕ್ಕೂ ಕರೆದುಕೊಂಡು ಹೋಗುವುದಿಲ್ಲ. ಏನಾದರೂ ಮಾಡಿಕೊಳ್ಳಿ ಎಂದು 1ನೇ ಆರೋಪಿ ಹೇಳಿದರು. 1ನೇ ಆರೋಪಿ ನನಗೆ

ಈಗಾಗಲೇ ದೂರು ಕೊಟ್ಟಿದ್ದೀಯಾ ನಿನ್ನಷ್ಟಕ್ಕೆ ನೀನಿರು. ನನ್ನನ್ನು ಕೂಡ ನನ್ನ ಪಾಡಿಗೆ ಇರಲು ಬಿಡುವಂತೆ ಬೈದರು. ನಾನು ಯಾವುದೇ ಕಾರಣಕ್ಕೂ ಮನೆಗೆ ಕರೆದುಕೊಂಡು ಹೋಗುವುದಿಲ್ಲ ಎಂದು ಹೇಳಿದರು. ದಿಃ 21.02.2024 ರಂದು ನಾನು ಮೈಸೂರಿನ ಮಹಿಳಾ ಪೋಲಿಸ್ ಠಾಣೆಯಲ್ಲಿ ನಿಪಿ-1ರ ದೂರನ್ನು ಕೊಟ್ಟೆ.

ದಿಃ 26.02.2024 ರಂದು ಪೋಲಿಸರು ಬೀಜಗನಹಳ್ಳಿ ಗ್ರಾಮದಲ್ಲಿರುವ ನನ್ನ ಗಂಡನ ಮನೆಗೆ ಮಹಜರಿನ ಸಲುವಾಗಿ ಬಂದರು. ಆಗ ನಾನು ಹಾಜರಿದ್ದು, ಸ್ಥಳ ತೋರಿಸಿದ್ದೇನೆ. ಆಗ ಚಾಸಾ-8 ಮತ್ತು ಇನ್ನೊಬ್ಬರು ಇದ್ದರು. ಅಲ್ಲಿ ಮಧ್ಯಾಹ್ನ 1 ರಿಂದ 2 ಗಂಟೆಯವರೆಗೆ ಮಹಜರು ಕ್ರಮ ಜರುಗಿಸಿದರು. ಆ ಸಮಯದಲ್ಲಿ ನಾನು ಪೋಲಿಸರಿಗೆ ನನ್ನ ಮದುವೆಯ ಆಮಂತ್ರಣ ಪತ್ರಿಕೆ, 3 ಪೋಟೋಗಳು ಹಾಗೂ ನನಗೆ ಹೊಡೆದ ಬಗ್ಗೆ ಒಂದು ಪೋಟೋವನ್ನು ಹಾಜರುಪಡಿಸಿದೆ. ಅವುಗಳನ್ನು ಈಗ ನೋಡುತ್ತಿದ್ದು ನಿಪಿ-4 ರಿಂದ 8 ಎಂದು ಗುರುತಿಸಲಾಯಿತು. ಸದರಿ ಮಹಜರಿಗೆ ನಾನು ಸಹಿ ಹಾಕಿದ್ದೇನೆ. ಸದರಿ ಮಹಜರಿನಲ್ಲಿ ಏನು ಬರೆದಿದೆ ಎಂದು ಓದಿ ತಿಳಿದುಕೊಂಡಿದ್ದೇನೆ. ನಂತರ ಅದೇದಿನ ಮಧ್ಯಾಹ್ನ 2.15 ರಿಂದ 3.15 ರವರೆಗೆ ಪೋಲಿಸರು ಬೀಜಗನಹಳ್ಳಿಯಲ್ಲಿರುವ ನನ್ನ ತಂದೆಯ ಮನೆಗೆ ಬಂದು ಸ್ಥಳ ಮಹಜರು ಮಾಡಿದರು. ಆಗ ನಾನು ಸ್ಥಳ ತೋರಿಸಿದೆ. ಚಾಸಾ-8 ಮತ್ತು ಇನ್ನೊಬ್ಬರು ಹಾಜರಿದ್ದರು. ಅಲ್ಲಿಂದ ನನ್ನ ಮತ್ತು 1ನೇ ಆರೋಪಿಯ ಮದುವೆಯಾಗಿದ್ದ ಹುಣಸೂರು ಮಂಜುನಾಥ ದೇವಸ್ಥಾನಕ್ಕೆ ಹೋದೆವು. ಅಲ್ಲಿ ಪೊಲಿಸರು 2.15 ರಿಂದ 3.15ರವರೆಗೆ ಮಹಜರು ಮಾಡಿದರು. ಅದಕ್ಕೆ ನಾನು ಸಹಿ ಮಾಡಿದ್ದೇನೆ ಹಾಗೂ ಸ್ಥಳ ತೋರಿಸಿದ್ದೇನೆ. ನನ್ನ ಜೊತೆ ಚಾಸಾ-7 ಮತ್ತು 8 ರವರು ಹಾಜರಿದ್ದರು. ಆ ಸಮಯದಲ್ಲಿ ನಿಪಿ-4 ಬಾವಚಿತ್ರವನ್ನು ತೆಗೆದಿದ್ದಾರೆ.

ಅದಾದ ನಂತರ ಮರುದಿನ ಪೋಲಿಸ್ ಠಾಣೆಗೆ ಹೋಗಿ ಹೇಳಿಕೆ ನೀಡಿದ್ದೇನೆ. ದಿಃ 02.03.2024 ರಂದು ನ್ಯಾಯಾಲಯಕ್ಕೆ ಬಂದು ಹೇಳಿಕೆಯನ್ನು ನೀಡಿದ್ದೇನೆ. ಆ ದಿನ ನನಗೆ ಹಲ್ಲೆ ಮಾಡಿದ ಹಾಗೂ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ***(ನ್ಯಾಯಾಲಯದ ಕಡತದಲ್ಲಿ ದಿಃ 02.03.2024 ರಂದದು ದಾಖಲಿಸಿಕೊಂಡ ಸಂತ್ರಸ್ಥೆಯ ಹೇಳಿಕೆ ಕಂಡು ಬರುವುದಿಲ್ಲ. ಆದರೆ ದೋಷಾರೋಪಣಾ***

***ಪತ್ರದೊಂದಿಗೆ ತನಿಖಾಧಿಕಾರಿಯು ಸದರಿ ಹೇಳಿಕೆಯನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗಮನಿಸಿದಾಗ ಸಿ.ಮಿಸ್ ನಂ. 33/2024 ರಲ್ಲಿ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ, ಹುಣಸೂರಿನಲ್ಲಿ ಸಂತ್ರಸ್ಥೆಯ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಆದ್ದರಿಂದ ಆಡಳಿತ ಶಿರಸ್ತೇದಾರರು ಸಂತ್ರಸ್ಥೆಯಹೇಳಿಕೆಯನ್ನು ಈ ಕಡತಕ್ಕೆ ಸೇರಿಸಬೇಕೆಂದು ಆದೇಶಸಲಾಗಿದ. ಆ ಕಾರಣದಿಂದ ಸಾಕ್ಷಿಯ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುದೂಡಲಾಯಿತು)***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.